

# ಸೂರೆಗೊಂಡೀತೆ ನಮ್ಮ ಭವಿಷ್ಯ?

**ಆಹಾರದಲ್ಲಿ, ಮಾನವನ ದೇಹದಲ್ಲಿ ಸೇರುತ್ತಿರುವ ಕೃತಕ ರಾಸಾಯನಿಕಗಳು, ಅವುಗಳ ಪರಿಣಾಮಗಳ ಕುರಿತ ಸಂಗತಿಗಳು ಬೆಳಕಿಗೆ ಬರುತ್ತಲೇ ಇವೆ. ಆದರೆ ಸುಮಾರು 30 ವರ್ಷಗಳ ಹಿಂದೆಯೇ ನಾವು ದಿನನಿತ್ಯ ಬಳಸುವ ವಸ್ತುಗಳಲ್ಲಿನ ಕೃತಕ ರಾಸಾಯನಿಕಗಳು ಹೇಗೆ ಮಾನವರಿಗೆ, ಇತರ ಜೀವರಾಶಿಗೆ ಹಾಗೂ ಪರಿಸರಕ್ಕೆ ಮಾರಕವಾಗಿವೆ ಎಂಬುದರ ಕುರಿತು ಪುಸ್ತಕವೇ ರಚಿತವಾಗಿದೆ.**

■ ಜೆ. ಬಾಲಕೃಷ್ಣ

## ಕೃತಕ ರಾಸಾಯನಿಕಗಳು ಮತ್ತು ನಮ್ಮ ಬದುಕು

ಕೆಲವು ದಿನಗಳ ಹಿಂದೆ ಕರ್ನಾಟಕದ ಆರೋಗ್ಯ ಸಚಿವರು ಹೋಟೆಲುಗಳಲ್ಲಿ ಇಡ್ಲಿ ತಯಾರಿಕೆಗೆ ಹಾಗೂ ಪಾರ್ಸೆಲ್‌ಗೆ ಪ್ಲಾಸ್ಟಿಕ್ ಹಾಳೆ ಬಳಸುತ್ತಿರುವುದು ಹಾಗೂ ಬಟಾಣಿ, ಮಂಚೂರಿ ಮುಂತಾದ ಕಾಳು, ತಿಂಡಿಗಳಿಗೆ ಕೃತಕ ಬಣ್ಣ ಹಾಕುವುದು ಮಾನವನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡುವುದರಿಂದ ಅವುಗಳ ಬಳಕೆಯನ್ನು ಅಧಿಕೃತವಾಗಿ ನಿಷೇಧಿಸುವ ಕುರಿತು ಮಾತನಾಡಿದ್ದರು.

ಈ ಸಂದರ್ಭದಲ್ಲಿ 1996ರಲ್ಲಿ ಥಿಯೊ ಕೋಲ್ಬರ್ನ್, ಡಯಾನ್ ಡುಮನೋಸ್ಕಿ ಮತ್ತು ಜಾನ್ ಪೀಟರ್ಸನ್ ಮೇಯರ್ಸ್ ಅವರಿಂದ ರಚಿತವಾದ 'ಅವರ್ ಸ್ಟೋಲನ್ ಫ್ಯೂಚರ್' **(Our stolen future: are we threatening our fertility, intelligence and survival?: a scientific detective story** – ಸೂರೆಗೊಂಡ ನಮ್ಮ ಭವಿಷ್ಯ: ನಾವು ನಮ್ಮ ಫಲವಂತಿಕೆ, ಬುದ್ಧಿಮತ್ತೆ ಮತ್ತು ಅಸ್ತಿತ್ವವನ್ನೇ ಅಪಾಯಕ್ಕೊಡ್ಡುತ್ತಿದ್ದೇವೆಯೆ?: ಒಂದು ವೈಜ್ಞಾನಿಕ ಪತ್ತೇದಾರಿ ಕತೆ) ಎಂಬ ಕೃತಿಯನ್ನು ನೆನಪಿಸಿಕೊಳ್ಳುವುದು ಸೂಕ್ತವಾಗಿದೆ.

1962ರಲ್ಲಿ ರೇಚೆಲ್ ಕಾರ್ಸನ್‌ರವರ 'ಸೈಲೆಂಟ್ ಸ್ಪ್ರಿಂಗ್' ಕೃತಿ ಕೀಟನಾಶಕಗಳ ಬಳಕೆ ಪರಿಸರದ ಮೇಲೆ, ಮಾನವರನ್ನೊಳಗೊಂಡಂತೆ ಇತರೆ ಜೀವರಾಶಿಗೆ ಹೇಗೆ ಅಪಾಯಕಾರಿಯಾಗುತ್ತದೆ ಎನ್ನುವುದರ ಕುರಿತು ಜಗತ್ತಿಗೆ ಮೊಟ್ಟಮೊದಲ ಎಚ್ಚರಿಕೆ ನೀಡಿತ್ತೋ ಅದರಂತೆ ನಮ್ಮ ದಿನನಿತ್ಯ ಬದುಕಿನಲ್ಲಿ ನಾವು ನಿರಂತರವಾಗಿ ಬಳಸುತ್ತಿರುವ ಕೃತಕ ರಾಸಾಯನಿಕಗಳು ಮಾನವ ಆರೋಗ್ಯ ಮತ್ತು ಪರಿಸರದ ಮೇಲೆ ಎಂಡೊಕ್ರೈನ್–ಅಡ್ಡಿಪಡಿಸುವ ರಾಸಾಯನಿಕಗಳ **(Endocrine Disrupting Chemicals)** ಭೀಕರ ಪರಿಣಾಮಗಳನ್ನು ವಿವರಿಸುವ ಮಹತ್ತರ ಕೃತಿ.

ಈ ಕೃತಿಯಲ್ಲಿ ಲೇಖಕರು ಸಂಶ್ಲೇಷಿತ ಅಥವಾ ಕೃತಕ ರಾಸಾಯನಿಕಗಳು ಮಾನವ ದೇಹದ ಹಾರ್ಮೋನ್ ವ್ಯವಸ್ಥೆಗಳೊಂದಿಗೆ ಹೇಗೆ ಹಸ್ತಕ್ಷೇಪ ಮಾಡುತ್ತವೆ ಮತ್ತು ವನ್ಯಜೀವಿ, ಪರಿಸರ ವ್ಯವಸ್ಥೆ ಮತ್ತು ಮಾನವರ ಮೇಲೆ ಹೇಗೆ ವಿನಾಶಕಾರಿ ಪರಿಣಾಮಗಳನ್ನು ಬೀರುತ್ತವೆ ಎಂಬುದನ್ನು